**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ ನ್ಯಾಯಾಲಯ.**

**ರಟ್ಟೀಹಳ್ಳಿ.**

**ಸಿ.ಸಿ.ನಂಬರ್ಃ 117/2018**

ಸಿಡಬ್ಲ್ಯೂಃ 10

ಪಿಡಬ್ಲ್ಯೂಃ 9

| | | |
|---|---|---|
| ಸಾಕ್ಷಿಯ ಹೆಸರು | : | ಗೌರಮ್ಮ ಪಾಟೀಲ |
| ಗಂಡನ ಹೆಸರು | : | ಶಂಕರಗೌಡ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಡೂರ |

ಇಂದು ದಿನಾಂಕಃ 28.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ಚಾಸಾ–1, 6 ರಿಂದ 9, 11 ರಿಂದ 13 ರವರು ನನಗೆ ಪರಿಚಯ ಇರುವುದಿಲ್ಲ. ಆರೋಪಿ 1 ಹಾಗೂ 2 ರವರು ನನಗೆ ಗೊತ್ತು. 1 ನೇ ಆರೋಪಿಯ ಆಟೋದಲ್ಲಿ ಕಡೂರಿನಿಂದ ಅಬಲೂರಿಗೆ ತೊಟ್ಟಿಲು ಕಾರ್ಯಕ್ರಮಕ್ಕೆ ನಾವು 7–8 ಜನ ಸುಮಾರು 9 ವರ್ಷಗಳ ಹಿಂದೆ ಹೋಗಿದ್ದೆವು. ಅಲ್ಲಿಂದ ಹಿಂದಿರುಗಿ ಬರುವಾಗ ಆಟೋದಲ್ಲಿ ಮಲಗಿದ್ದು, ಅಲ್ಲಿ ಏನಾಯಿತು ಗೊತ್ತಾಗಲಿಲ್ಲ, ನನಗೆ ತಲೆಗೆ ಪೆಟ್ಟಾಗಿತ್ತು. ಉಳಿದವರಿಗೆ ಎನಾಗಿತ್ತು ಎಂದು ನನಗೆ ಗೊತ್ತಿಲ್ಲ. ಮಲ್ಲಮ್ಮ ತೀರಿಕೊಂಡಿರುತ್ತಾರೆ. ಮಲ್ಲಮ್ಮ ಯಾವ ರೀತಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ದೂರನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

1. 9 ವರ್ಷಗಳ ಹಿಂದೆ ಎಂದರೆ ದಿನಾಂಕ 19.03.2017 ಎಂದರೆ ಸರಿ. ಆ ದಿನ ಮುಂಜಾನೆ ಚಾಸಾ–6 ರವರು ನನ್ನ ಮಗುವಿನ ತೊಟ್ಟಿಲು ಕಾರ್ಯಕ್ರಮ ಇದೆ ಬನ್ನಿ ಎಂದು ನಮಗೆ ಹೇಳಿದ್ದರಿಂದ ನಾವು ಆಟೋದಲ್ಲಿ ಹೊಗಿದ್ದೆವು ಎಂದರೆ ಸರಿ.

2. ಅದೇ ರೀತಿ ಚಾಸಾ-6 ರಿಂದ 9, 11 ರಿಂದ 13 ಆಟೋದಲ್ಲಿ ಹಾಗೂ ಚಾಸಾ-9 ರವರ ಮಕ್ಕಳಾದ ಪ್ರಿಯಾದ ಗಗನ ಆಟೋದಲ್ಲಿ ಬಂದಿರುತ್ತಾರೆ ಎಂದರೆ ಸರಿ. ಸದರಿ ಆಟೋವನ್ನು ಆರೋಪಿ 1 ರವರು ಚಲಾಯಿಸುತ್ತಿದ್ದರು ಎಂದರೆ ಸರಿ. ಸದರಿ ಆಟೋವನ್ನು ಆರೋಪಿ 1 ರವರು ಅಬಲೂರಿನಿಂದ ಕೋಡ ರಟ್ಟೀಹಳ್ಳಿ ಮಾರ್ಗವಾಗಿ ಕಡೂರು ಕಡೆಗೆ ಅತೀ ಜೋರಾಗಿ ನಿರ್ಲಕ್ಷ್ಯತನದಿಂದ ಆಟೋ ಚಲಾಯಿಸಿಕೊಂಡು ಹೋಗಿ, ರಟ್ಟೀಹಳ್ಳಿ ಗ್ರಾಮದ ಕುಮುದ್ವತಿ ನದಿಯ ಬ್ರಿಡ್ಜ ಹತ್ತಿರ ಯಾವುದೇ ಮುನ್ಸೂಚನೆ ನೀಡದೇ ಒಮ್ಮಿಂದೊಮ್ಮಲೇ ಮೋಟಾರ್ ಸೈಕಲ್‌ಗೆ ಡಿಕ್ಕಿ ಮಾಡುತ್ತೇನೆ ಎಂದು ಒಮ್ಮೆಲೆ ಎಡಕ್ಕೆ ಕಟ್ ಮಾಡಿ ಆಟೋ ಪಲ್ಟಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

3. ಆಟೋದಲ್ಲಿ ಎಲ್ಲರಿಗೂ ಗಾಯಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ನಮ್ಮನ್ನು ರಟ್ಟೀಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ನಂತರ ಮಲ್ಲಮ್ಮ ಚಾಸಾ-6 ಹಾಗೂ 12 ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ರಾಣೇಬೆನ್ನೂರಿಗೆ ಕರೆದುಕೊಂಡು ಹೋಗುತ್ತಿರುವಾಗ ರಟ್ಟಿಹಳ್ಳಿಯ ಶಿವ ಪೆಟ್ರೋಲ್ ಬಂಕ್ ಹತ್ತಿರ ಮಲ್ಲಮ್ಮ ಮೃತಪಟ್ಟಿದ್ದು ಆಕೆಯನ್ನು ಹಿಂತಿರುಗಿ ರಟ್ಟೀಹಳ್ಳಿ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಕೊಟ್ಟು, ಇನ್ನುಳಿದವರನ್ನು ರಾಣೇಬೆನ್ನುರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿ 1 ಹಾಗೂ 2 ರವರ ತಪ್ಪಿನಿಂದ ಆಗಿರುತ್ತದೆ ಎಂದು ಚಾಸಾ-1 ರವರು ದೂರನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಪೊಲೀಸರು ವಿಚಾರಣೆ ಮಾಡಿ, ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತಿರಸ್ಕರಿಸಿದ ಹೇಳಿಕೆ ಭಾಗವನ್ನು ನಿಪಿ-34 ಎಂದು ಗುರುತಿಸಲಾಯಿತು. ಸದರಿ ಅಪಘಾತ ಆರೋಪಿ 1 ಮತ್ತು 2 ರವರ ತಪ್ಪಿನಿಂದ ಆಗಿದ್ದು, ಆ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ. ವಿ.ವಿ.ಎಮ್. ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ ನ್ಯಾಯಪೀಠ ರಟ್ಟೀಹಳ್ಳಿ.

**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ ನ್ಯಾಯಾಲಯ.**

**ರಟ್ಟೀಹಳ್ಳಿ.**

**ಸಿ.ಸಿ.ನಂಬರ್ಃ 117/2018**

ಸಿಡಬ್ಲ್ಯೂಃ 11

ಪಿಡಬ್ಲ್ಯೂಃ 10

| | | |
|---|---|---|
| ಸಾಕ್ಷಿಯ ಹೆಸರು | : | ಪವಿತ್ರಾ ಯರಳ್ಳಿ |
| ಗಂಡನ ಹೆಸರು | : | ನಾಗರಾಜ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಡೂರ |

ಇಂದು ದಿನಾಂಕಃ 28.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ಚಾಸಾ-1, 6 ರಿಂದ 10, 12 ಮತ್ತು 13 ರವರು ನನಗೆ ಪರಿಚಯ ಇರುವುದಿಲ್ಲ. ಆರೋಪಿ 1 ಹಾಗೂ 2 ರವರು ನನಗೆ ಗೊತ್ತು. 1 ನೇ ಆರೋಪಿಯ ಆಟೋದಲ್ಲಿ ಕಡೂರಿನಿಂದ ಅಬಲೂರಿಗೆ ತೊಟ್ಟಿಲು ಕಾರ್ಯಕ್ರಮಕ್ಕೆ ನಾವು 7-8 ಜನ ಸುಮಾರು 10 ವರ್ಷಗಳ ಹಿಂದೆ ಹೋಗಿದ್ದೆವು. ಅಲ್ಲಿಂದ ಹಿಂದಿರುಗಿ ಬರುವಾಗ ಆಟೋದಲ್ಲಿ ನಾನು ಮಗುವನ್ನು ಹಿಡಿದುಕೊಂಡು ಕುಳಿತಿದ್ದು, ಅಲ್ಲಿ ಏನಾಯಿತು ಗೊತ್ತಾಗಲಿಲ್ಲ, ನನ್ನ ಮಗು ಅಳುತ್ತಿತ್ತು, ನನಗೆ ತಲೆಗೆ ಪೆಟ್ಟಾಗಿತ್ತು. ಉಳಿದವರಿಗೆ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ. ಮಲ್ಲಮ್ಮ ತೀರಿಕೊಂಡಿರುತ್ತಾರೆ. ಮಲ್ಲಮ್ಮ ಯಾವ ರೀತಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ದೂರನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

1. 10 ವರ್ಷಗಳ ಹಿಂದೆ ಎಂದರೆ ದಿನಾಂಕ 19.03.2017 ಎಂದರೆ ಸರಿ. ಆ ದಿನ ಮುಂಜಾನೆ ಚಾಸಾ-6 ರವರು ನನ್ನ ಮಗುವಿನ ತೊಟ್ಟಿಲು ಕಾರ್ಯಕ್ರಮ ಇದೆ ಬನ್ನಿ ಎಂದು ನಮಗೆ ಹೇಳಿದ್ದರಿಂದ ನಾವು ಆಟೋದಲ್ಲಿ ಹೊಗಿದ್ದೆವು ಎಂದರೆ ಸರಿ. ಅದೇ ರೀತಿ ಚಾಸಾ-6 ರಿಂದ 10, 12 ರಿಂದ 13 ಆಟೋದಲ್ಲಿ ಹಾಗೂ ಚಾಸಾ-9 ರವರ ಮಕ್ಕಳಾದ ಪ್ರಿಯಾದ ಗಗನ ಆಟೋದಲ್ಲಿ ಬಂದಿರುತ್ತಾರೆ ಎಂದರೆ ಸರಿ. ಸದರಿ ಆಟೋವನ್ನು ಆರೋಪಿ 1 ರವರು ಚಲಾಯಿಸುತ್ತಿದ್ದರು ಎಂದರೆ ಸರಿ. ಸದರಿ ಆಟೋವನ್ನು ಆರೋಪಿ 1 ರವರು ಅಬಲೂರಿನಿಂದ ಕೋಡ ರಟ್ಟೀಹಳ್ಳಿ ಮಾರ್ಗವಾಗಿ ಕಡೂರು ಕಡೆಗೆ ಅತೀ ಜೋರಾಗಿ ನಿರ್ಲಕ್ಷ್ಯತನದಿಂದ ಆಟೋ ಚಲಾಯಿಸಿಕೊಂಡು ಹೋಗಿ, ರಟ್ಟೀಹಳ್ಳಿ ಗ್ರಾಮದ ಕುಮದ್ವತಿ ನದಿಯ ಬ್ರಿಡ್ಜ ಹತ್ತಿರ ಯಾವುದೇ ಮುನ್ಸೂಚನೆ ನೀಡದೇ ಒಮ್ಮಿಂದೊಮ್ಮಲೇ ಮೋಟಾರ್ ಸೈಕಲ್‌ಗೆ ಡಿಕ್ಕಿ ಮಾಡುತ್ತೇನೆ ಎಂದು ಒಮ್ಮೆಲೆ ಎಡಕ್ಕೆ ಕಟ್ ಮಾಡಿ ಆಟೋ ಪಲ್ಟಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

3. ಆಟೋದಲ್ಲಿ ಎಲ್ಲರಿಗೂ ಗಾಯಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ನಮ್ಮನ್ನು ರಟ್ಟೀಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ನಂತರ ಮಲ್ಲಮ್ಮ ಚಾಸಾ-6 ಹಾಗೂ 12 ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ರಾಣೇಬೆನ್ನೂರಿಗೆ ಕರೆದುಕೊಂಡು ಹೋಗುತ್ತಿರುವಾಗ ರಟ್ಟಿಹಳ್ಳಿಯ ಶಿವ ಪೆಟ್ರೋಲ್ ಬಂಕ್ ಹತ್ತಿರ ಮಲ್ಲಮ್ಮ ಮೃತಪಟ್ಟಿದ್ದು ಆಕೆಯನ್ನು ಹಿಂತಿರುಗಿ ರಟ್ಟೀಹಳ್ಳಿ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಕೊಟ್ಟು, ಇನ್ನುಳಿದವರನ್ನು ರಾಣೇಬೆನ್ನುರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿ 1 ಹಾಗೂ 2 ರವರ ತಪ್ಪಿನಿಂದ ಆಗಿರುತ್ತದೆ ಎಂದು ಚಾಸಾ-1 ರವರು ದೂರನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಪೊಲೀಸರು ವಿಚಾರಣೆ ಮಾಡಿ, ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತಿರಸ್ಕರಿಸಿದ ಹೇಳಿಕೆ ಭಾಗವನ್ನು ನಿಪಿ-35 ಎಂದು ಗುರುತಿಸಲಾಯಿತು. ಸದರಿ ಅಪಘಾತ ಆರೋಪಿ 1 ಮತ್ತು 2 ರವರ ತಪ್ಪಿನಿಂದ ಆಗಿದ್ದು, ಆ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ. ವಿ.ವಿ.ಎಮ್. ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ.